ಜೀವನ ನಡೆಸುತ್ತಿದ್ದಾರೆ. ಆದರೆ, ಅವನು ಎಲ್ಲರಿಂದ ತಿರಸ್ಕೃತನಾಗಿದ್ದ. ಅವನನ್ನು ಯಾರೂ ಕರೆದು ಕೆಲಸ ಕೊಡದೇ ಇದ್ದುದರಿಂದ ತೀವ್ರವಾದ ಹಣದ ಮುಗ್ಗಟ್ಟಿಗೆ ಒಳಗಾಗಿದ್ದ. ಅವನ ಜಮಾನಾದಲ್ಲಿ ಅವನ ಅಭಿಮಾನಿಯಾಗಿದ್ದ ಯಾರೋ ಬ್ಯಾಂಕ್ ಮ್ಯಾನೇಜರ್ ಆತನ ಡೆಪಾಸಿಟ್ ಟಾರ್ಗೆಟ್‌ಗಾಗಿ ಅಂಗಲಾಚಿದ್ದರಿಂದ ಆತನ ಒತ್ತಾಯಕ್ಕೆ ಯಾವಾಗಲೋ ಬ್ಯಾಂಕಿನಲ್ಲಿ ಇಟ್ಟಿದ್ದ ಒಂದಷ್ಟು ಡಿಪಾಸಿಟ್ಟಿನ ಬಡ್ಡಿಯೆ ಅವನ ಜೀವನಕ್ಕೆ ಏಕೈಕ ಆಧಾರವಾಗಿದ್ದರಿಂದ ಅವನು ಈಗ ಅನುಭವಿಸುತ್ತಿದ್ದಂತಹ ವೈಭೋಗಕ್ಕಿಂತ ಒಂದು ಪೈಸೆಯಷ್ಟೂ ಹೆಚ್ಚಿನ ಸುಖವನ್ನು ಅವನು ಬಯಸುವಂತಿರಲಿಲ್ಲ.

ನಿನ್ನೆ ರಾತ್ರೆಯೂ ಹಾಗೆಯೆ ಶನಿವಾರವಾದ್ದರಿಂದ ಏನೋ ಒಂದಷ್ಟು ಮೈಬಿಸಿ ಮಾಡಿಕೊಳ್ಳುವ ಎನ್ನಿಸಿ ಸಂಜೆಯೆ ಬಾಬಣ್ಣನಿಗೆ ರಾತ್ರೆ ಊಟಕ್ಕೆ ಏನಾದರೂ ಕಳಿಸು ಎಂದು ಹೇಳಿ ಬಂದಿದ್ದ. 'ಏನಾದರೂ' ಅಂದರೆ ಏನೇನು ಎಂಬುದು ಗೊತ್ತಿದ್ದ ಬಾಬಣ್ಣ ಒಂದು ಪ್ಲೇಟು ಮಟನ್ ಬಿರಿಯಾನಿ ಮತ್ತೊಂದು ಪ್ಲೇಟು ಚಿಕನ್ ಚಿಲ್ಲಿ ಜೊತೆಗೆ ಒಂದು ಅರ್ಧ ಬಾಟಲು ರಮ್ಮು ಕಳಿಸಿಕೊಟ್ಟಿದ್ದ. ಆದೆಲ್ಲ ಕುಡಿದು ತಿಂದು ಮೈಮೇಲೆ ಪ್ರಜ್ಞೆ ಇಲ್ಲದೆ ಗತಕಾಲದ ಕನಸು ಕಾಣುತ್ತಾ ಮಲಗಿದ ಅವನಿಗೆ ಬೆಳಗ್ಗೆ ಎದ್ದಾಗ ತನ್ನ ಬಾಯಿಂದ ಅಸಾಧ್ಯ ಗಬ್ಬು ವಾಸನೆ ಬರುತ್ತಿದೆ ಎನ್ನಿಸಿದಾಗಲೆ ಗೊತ್ತಾದದ್ದು ತಾನು ರಾತ್ರೆ ಹಲ್ಲುಸೆಟ್ಟು ತೆಗೆದು ತೊಳೆದಿಡದೆ ಮಲಗಿದ್ದೆ ಎಂದು.

ಮುಖ ತೊಳೆಯಲು ಹೋಗುವ ಮುಂಚೆ ಹಲ್ಲುಸೆಟ್ಟು ತೆಗೆದು ನೀರಿನಲ್ಲಿ ಹಾಕಿದ. ಅದಕ್ಕೆ ಅಂಟಿಕೊಂಡಿದ್ದ ಮಾಂಸದ ತುಣುಕುಗಳು ಕೊಳೆಯಲಾರಂಭಿಸಿದ್ದರಿಂದಲೂ ಮದ್ಯದ ಪ್ರಭಾವದಿಂದಲೂ ತನ್ನ ಉಸಿರು ಮತ್ತು ಬಾಯಿ ಹೊರಡಿಸುತ್ತಿದ್ದ ದುರ್ಗಂಧಕ್ಕೆ ಅವನೇ ಹೇಸಿಕೊಂಡ. ಆಮೇಲೆ ಒಂದಷ್ಟು ಬಿಸಿನೀರು ಸುರಿದು ಹಲ್ಲುಸೆಟ್ಟು ಕ್ಲೀನು ಮಾಡಿದರಾಯಿತು ಎಂದುಕೊಳ್ಳುತ್ತಾ ಗಸಗಸನೆ ಬಾಯಿ ನಾಲಗೆ ಉಜ್ಜಿ ತೊಳೆದುಕೊಂಡು ಒಂದಷ್ಟು ಓಮದ ಕಾಳು ಜಗಿಯುತ್ತ ಬಾಯನ್ನು ಒಂದಷ್ಟು ಸುಧಾರಿಸಿಕೊಳ್ಳುತ್ತಾ ಈಗ ಸ್ವಲ್ಪ ವಾಸನೆ ಕಡಿಮೆ ಆಗ್ತಾ ಇದೆ ಎಂದು ತನ್ನನ್ನು ತಾನು ನಂಬಿಸಿಕೊಳ್ಳುವ ಪ್ರಯತ್ನ ಮಾಡಿದ. ಗ್ಯಾಸ್ ಸ್ಟೌ ಹತ್ತಿಸಿ ಒಂದಷ್ಟು ನೀರು ಬಿಸಿಮಾಡಿ ಕೊಳೆತು ನಾರುತ್ತಿದ್ದ ಹಲ್ಲುಸೆಟ್ಟನ್ನು ಅದರಲ್ಲಿ ನೆನೆಸಿದ. ಬಾಗಿಲ ಬಳಿ ಬಿದ್ದಿದ್ದ ಹಾಲಿನ ಪ್ಯಾಕೆಟ್ ಒಳಗೆ ತಂದು ಬಿಸಿಮಾಡಿ ಟೀ ಮಾಡಿಕೊಂಡು ಕುಡಿದ. ರಾತ್ರೆಯ ರಮ್ಮಿನ ಪ್ರಭಾವದಿಂದ ಉರಿಯುತ್ತಿದ್ದ ಹೊಟ್ಟೆ ಒಂದಿಷ್ಟು ತಂಪಾದ ಅನುಭವವಾಯಿತು.

ಈ ದಿನ ಭಾನುವಾರ ಎಂಬುದು ನೆನಪಾಯಿತು.

ಅಷ್ಟಕ್ಕೂ ಯಾವ ವಾರವಾದರೂ ಅವನಿಗೆ ಒಂದೇ. ಮಾಡಲೇನೂ ಕೆಲಸವಿಲ್ಲ. ಆದರೂ ವಾರವೆಲ್ಲ ಮನೆಯಲ್ಲೆ ಅಂತರ್ಮುಖಿಯಾಗಿ ಕುಳಿತು ಕಾಲಕಳೆಯುವ ಆತ ಭಾನುವಾರದಂದು ಮೈನ ಜಡ ಕಳೆದುಕೊಳ್ಳಲು ಹೊರಗೆ ತಿರುಗಾಡಲು ಹೋಗುತ್ತಾನೆ. ತಿರುಗಾಟ ಎಂದರೆ ದೂರದೂರಿಗೆ ವಿಹಾರವೇನೂ ಅಲ್ಲ, ಅಷ್ಟು ದುಡ್ಡೂ ಅವನ ಬಳಿ ಇಲ್ಲ, ಬದಲಾಗಿ ಒಂದೆರಡು ಘಂಟೆಗಳ ಕಾಲದ ಕಾಲ್ನಡಿಗೆ ಅಷ್ಟೆ. ಅವನು ಈಗಿರುವ ದರಿದ್ರಾವಸ್ಥೆಗೆ ಕಾರಿರಲಿ ಒಂದು ಸ್ಕೂಟರಿಗೂ ಗತಿ ಇರಲಿಲ್ಲ. ಈಗ ತಾನು ಏನೆಲ್ಲಾ ದುರವಸ್ಥೆ ಅನುಭವಿಸುತ್ತಿದ್ದೇನೋ ಅದೆಲ್ಲ ತನ್ನದೆ ಬೇಜವಾಬ್ದಾರಿಯ ಫಲ ಎಂದು ಅದೆಷ್ಟನೆಯ ಬಾರಿಯೋ ಅಂದುಕೊಂಡ. ಈಗಿನವರಂತೆ ತನ್ನ ಕಾಲ ನಡೆಯುತ್ತಿದ್ದಾಗ ಸಾಕಷ್ಟು ಆಸ್ತಿ ಮಾಡಿಟ್ಟಿದ್ದರೆ ಅಥವಾ ದುಡ್ಡು ಕಾಪಾಡಿಕೊಂಡಿದ್ದರೆ ಈಗ ಹಾಯಾಗಿರಬಹುದಿತ್ತು. ತನ್ನ ಕಾಲದಲ್ಲಿ ತನ್ನಂತೆ ಪ್ರಖ್ಯಾತರಾಗಿದ್ದವರು ಈಗಲೂ ಸಂಸಾರಿಗರಾಗಿ ಆರೋಗ್ಯ ಕಾಪಾಡಿಕೊಂಡು ವಯಸ್ಸಿಗೆ ತಕ್ಕಂತೆ ಅಪ್ಪ, ಅಜ್ಜನ ಪಾತ್ರಗಳನ್ನು ಮಾಡಿಕೊಂಡು ದುಡಿದುಕೊಳ್ಳುತ್ತಾ ಹಾಯಾಗಿದ್ದಾರೆ. ತಾನು ಮಾತ್ರ ಯೌವನ ಮತ್ತು ಕೀರ್ತಿಯ ಅಮಲಿನಲ್ಲಿ ಮೆರೆದು ಮದುವೆಯನ್ನೂ ಆಗದೆ ಈಗ ಒಬ್ಬಂಟಿಯಾಗಿ ರೋಗಿಷ್ಟನಾಗಿ...